ESI.A.No. 77/2018

AW–1,

ದಿನಾಂಕಃ 17–07–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ– ಎದುರುದಾರರ ಪರವಾಗಿಃ ಶ್ರೀ. ಎಸ್ ಡಬ್ಲ್ಯೂಕೆ ವಕೀಲರಿಂದ ಃ

ನಾನು ಮೂರು ವರ್ಷದಿಂದ ಎ ಇ ಇ ಆಗಿ ವಾಣಿ ವಿಲಾಸ ವಾಟರ್ ಸಪ್ಲೈ ಬೋರ್ಡ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಈ ಪ್ರಕರಣದ ಖುದ್ದಾಗಿ ಯಾವುದೇ ಮಾಹಿತಿ ಇರುವುದಿಲ್ಲ ಹಾಗೂ ನಾನು ದಾಖಲಾತಿಗಳ ಆಧಾರದ ಮೇರೆಗೆ ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿ . 2017 ರಲ್ಲಿ ನಮ್ಮ ಸಂಸ್ಥೆಯ ಕಾರ್ಮಿಕರು ಅರ್ಜಿದಾರರ ಸಂಸ್ಥೆ ಇಎಸ್ ಐ ವಂತಿಗೆಯನ್ನು ಕಟ್ಟಿರುವುದಿಲ್ಲ ಎಂದು ಎದುರುದಾರರಿಗೆ ದೂರನ್ನು ನೀಡಿರುವುದರ ಬಗ್ಗೆ ನನಗೆ ಗೊತ್ತಿಲ್ಲ. ಈ ದೂರು ಸ್ವೀಕರಿಸಿದ ನಂತರ ಎದುರುದಾರರು ನಮ್ಮ ಸಂಸ್ಥೆಗೆ ಭೇಟಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಾರ್ಪೋರೇಷನ್ 308 ಜನ ಗುತ್ತಿಗೆದಾರ ಕೆಲಸಗಾರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಎಂದು ಆದೇಶಿಸಿರುತ್ತಾರೆ ಎಂದರೆ ಸರಿ. ಸದರಿ ಕೆಲಸಗಾರರ ಪೈಕಿ 43 ಜನ ವಾಣಿ ವಿಲಾಸ ವಾಟರ್ ಸಪ್ಲೈ ಬೋರ್ಡ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಅವರು ಯಾರು ಎಂದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 09.10.2017 ರಲ್ಲಿ ಎದುರುದಾರರು ಅರ್ಜಿದಾರರ ಕಾರ್ಯಾಲಯಕ್ಕೆ ಭೇಟಿ ನೀಡಿ ನಿರೀಕ್ಷಣಾ ಮಾಡಿದಾಗ ಸದರಿ ಕಾರ್ಯಲಯದಲ್ಲಿ 43 ಕೆಲಸಗಾರರು ಇದ್ದಾರ ಎಂದು ಗೊತ್ತಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ ಎದುರುದಾರರು ದಿ 20.11.2017 ರಲ್ಲಿ ನೋಟೀಸ್ ನ್ನು ನೀಡಿ ಇ ಎಸ್ ಐ ಕೋಡ್ ನ್ನು ಪಡೆದುಕೊಳ್ಳುವಂತೆ ಸೂಚಿಸಿರುತ್ತಾರೆ ಎಂದರೆ ಸರಿ . ದಿನಾಂಕ 08.07.2021 ರಲ್ಲಿ ಎದುರುದಾರರು ಸಿ–11 ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿ . ಸಾಕ್ಷಿಗೆ ದಿನಾಂಕ 17.11.2017 ರ ಸಿ–11 ನೋಟೀಸನ್ನು ತೋರಿಸಲಾಗಿ ಸದರಿ ನೋಟೀಸ್ ಅರ್ಜಿದಾರರ ಕಾರ್ಯಾಲಯಕ್ಕೆ ಬಂದಿರುತ್ತದೆ ಎಂದು ಒಪ್ಪಿಕೊಳ್ಳಲಾಯಿತು. ಸದರಿ ನೋಟೀಸನ್ನು ನಿ ಆರ್ –1 ಎಂದು ಗುರುತಿಸಲಾಯಿತು. ನಿ ಆರ್ –1 ನಲ್ಲಿ ನಮೂದಿಸಲಾದ ಇ ಎಸ್ ಐ ಕೋಡ್ ಅರ್ಜಿದಾರರ ಕಾರ್ಯಾಲಯಕ್ಕೆ ಸೇರಿದ ಕೋಡ್ ಆಗಿರುತ್ತದೆ ಎಂದರೆ ಸರಿ . ಅರ್ಜಿದಾರರಿಗೆ ಇ ಎಸ್ ಐ ಕೋಡ್ ಹಾಗೂ ಮೈಸೂರು ಸಿಟಿ ಕಾರ್ಪೋರೇಷನ್ ಇ ಎಸ್ ಐ ಕೋಡ್ ಬೇರೆ ಬೇರೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿ ಆರ್ –1 ನೋಟೀಸ್ ಸ್ವೀಕರಿಸಿದ ನಂತರ ಅರ್ಜಿದಾರರು ತಮ್ಮ ಕಾರ್ಯಾಲಯವು ಮೈಸೂರು ಸಿಟಿ ಕಾರ್ಪೋರೇಷನ್ ಅಡಿ ಬರುವುದರಿಂದ ಒಂದೇ ಇ ಎಸ್ ಐ ಕೋಡ್ ನ ಅಡಿಯಲ್ಲಿ ನಮ್ಮ ಕಾರ್ಯಾಲಯದ ಕೆಲಸಗಾರರನ್ನು ತರುವಂತೆ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಎದುರುದಾರರು ನಮ್ಮ ಕಾರ್ಯಾಲಯಕ್ಕೆ ಬಂದು ನಿರೀಕ್ಷಣೆ ಮಾಡಿದಾಗ ಅವರಿಗೆ ನಮ್ಮ ಕಾರ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುವ ಕೆಲಸಗಾರರ ಮಾಹಿತಯನ್ನು ನೀಡಿರುವುದಿಲ್ಲ ಎಂಬ ಸೂಚನೆಗೆ ಸಾಕ್ಷಿದಾರರು ಎದುರುದಾರರು ಯಾವುದೇ ನಿರೀಕ್ಷಣೆಯನ್ನು ಮಾಡಿರುವುದಿಲ್ಲ ಆದುದರಿಂದ ಮಾಹಿತಿಯನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾಖಲಾತಿಗಳನ್ನು ನೀಡದೇ ಇದ್ದುದರಿಂದ ನಮ್ಮ ಕಾರ್ಯಾಲಯಕ್ಕೆ ಬಂದಿದ್ದ ಎಸ್ ಎಸ್ ಒ ರವರು ಕೆಲಸಗಾರರ ಬಳಿ ಅವರ ಹೆಸರು , ವಿವರ ಮತ್ತು ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಕ್ಟೋಬರ್ 2017 ರಿಂದ ಏಪ್ರಿಲ್ 2018 ರವರಗೆ ಯಾವುದೇ ವಂತಿಗೆಯನ್ನು ಪಾವತಿಸಿರುವುದಿಲ್ಲ ಎಂದರೆ ಸರಿ . ಸದರಿ ನೋಟೀಸನಲ್ಲಿ 2,17,645/- ರೂಪಾಯಿಗಳನ್ನು ಕಟ್ಟುವಂತೆ ಸೂಚಿಸಲಾಗಿತ್ತು ಎಂದರೆ ಸರಿ . ಸದರಿ ನೋಟೀಸನಲ್ಲಿ ದಾಖಲಾತಿಗಳಿಗೆ ಖುದ್ದು ಸುನಾವಣೆ ಗೆ ಹಾಜರಾಗುವಂತೆ ಸೂಚಿಸಲಾಗಿತ್ತು ಎಂದರೆ ಸರಿ . ದಿನಂಾಕ 26.06.2018 ರಂದು ನಮ್ಮ ಕಾರ್ಯಾಲಯದಿಂದ ಖುದ್ದು ಸುನಾವಣೆಗೆ ಯಾರೂ ಹಾಜರಾಗದೇ ಇದ್ದುದರಿಂದ ಎದುರುದಾರರು ದಿನಾಂಕ 11.07.2018 ರಂದು ಖುದ್ದು ಸುನಾವಣೆಗೆ ಹಾಜರಾಗುವಂತೆ ಮತ್ತೊಂದು ನೊಟೀಸನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎರಡೂ ಖುದ್ದು ಸುನಾವಣೆಗೆ ಯಾರೂ ಹಾಜರಾಗದೇ ಇದ್ದುದರಿಂದ ಎದುರುದಾರರು ಸೆಕ್ಸನ್ -45 ರ ಅಡಿಯಲ್ಲಿ ಆದೇಶವನ್ನು ಹೊರಡಿಸಿರುತ್ತಾರೆ ಎಂದರೆ ಸರಿ . ಸದರಿ ಆದೇಶವನ್ನು ಪ್ರಶ್ನಿಸಿ ಸೆಕ್ಸನ್ಸ 45 ಎಎ ಅಡಿಯಲ್ಲಿ ಯಾವುದೇ ಮೇಲ್ಮನವಿಯನ್ನು ಸಲ್ಲಿರುವುದಿಲ್ಲ ಎಂದರೆ ಸರಿ . ಅರ್ಜಿದಾರರ ಕಾರ್ಯಾಲಯದಲ್ಲಿ 43 ಕೆಲಸಗಾರರಿಗೆ ಸಂಬಂಧಿಸಿದ ವೇಜ್ ರಿಜಿಸ್ಟರ್ ಮತ್ತು ಅಟೆಂಡೆನ್ಸ್ ರಿಜಿಸ್ಟರ್ ನ್ನು ಹಾಜರು ಪಡಿಸಲಿಲ್ಲ ಎಂಬ ಸೂಚನೆಗೆ ಸಾಕ್ಷಿದಾರರು ಸದರಿ 43 ಕೆಲಸಗಾರರು ಯಾರು ಎಂದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಕೆಲಸಗಾರರ ಬಗ್ಗೆ ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ.ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.